# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 448/2021**

**ಸಿ.ಡಬ್ಲೂಃ 09 ಪಿಡಬ್ಲೂಃ01**

ಸಾಕ್ಷಿದಾರರ ಹೆಸರುಃ ಮಲ್ಲಯ್ಯ ತಂದೆಃವಾಗೀಶಯ್ಯ
ವಯಸ್ಸುಃ 36 ವರ್ಷ
ಉದ್ಯೋಗಃ ವ್ಯವಸಾಯ,
ಸಾಕೀನಃ ಗೀರಿಯಾಪುರ.

ದಿಃ **28-10-2025** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ;

ನನಗೆ ಆರೋಪಿತನ ಪರಿಚಯ ಇರುವುದಿಲ್ಲ. ಚಾ.ಸಾ.01 ರಿಂದ 08 ಮತ್ತು 09 ರವರ ಪರಿಚಯ ನನಗೆ ಇರುವುದಿಲ್ಲ.

**02.** ನಾನು ಯಾವುದೇ ಅಪಘಾತ ನೋಡಿಲ್ಲ, ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ;

03. ದಿನಾಂಕ ಃ **22-04-2021** ರಂದು ಮೃತ ದೊಡ್ಡ ಹನುಮಪ್ಪನು ಹಾವೇರಿಯಿಂದ ಗೀರಿಯಾಪುರ ಮಠಕ್ಕೆ ಹೋಗುತ್ತಿದ್ದಾಗ ಗೀರಿಯಾಪುರ ಮಠದ ಹತ್ತಿರ ಬಸ್ಸಿನಿಂದ ಇಳಿಯುವುದನ್ನು ಮರೆತು ಮುಂದೆ ಹೋಗಿ ಗೀರಿಯಾಪುರದ ಹಳ್ಳದ ಹತ್ತಿರ ಇಳಿದು ರಸ್ತೇ ದಾಟುತ್ತಿರುವಾಗ ಹಡಗಲಿ ಮೈಲಾರ ಮುಖ್ಯರಸ್ತೇಯಲ್ಲಿ ಹಿರೇಹಡಗಲಿ ಕಡೆಯಿಂದ ಆರೋಪಿ ತನ್ನ **KSRTC** ಬಸ್ಸ ನಂಬರ **KA.35.F.0179** ನೇದ್ದನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ರಸ್ತೇ ದಾಟುತ್ತಿದ್ದ ದೊಡ್ಡ ಹನುಮಪ್ಪನಿಗೆ ಮಧ್ಯಾಹ್ನ **02.45** ಗಂಟೆಗೆ ಡಿಕ್ಕಿ ಪಡೆಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಿಂದ ದೊಡ್ಡ ಹನುಮಪ್ಪನಿಗೆ ತಲೆಗೆ, ಬಲಮೊಣಕಾಲು ಹತ್ತಿರ ಹಾಗೂ ಎಡಗಾಲು ಹೆಬ್ಬೆರಳಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿ ಹಿರೇಹಡಗಲಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದರೆ

ನನಗೆ ಗೊತ್ತಿಲ್ಲ, ನಾನು ಸದರಿ ಆಸ್ಪತ್ರೆಗೆ ಹೋಗಿದ್ದು ವೈದ್ಯರು ಗಾಯಾಳುವನ್ನು ಪರಿಶೀಲಿಸಲಾಗಿ ದೊಡ್ಡ ಹನುಮಪ್ಪನು ಮೃತ ಪಟ್ಟಿರುವುದಾಗಿ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಸದರಿ ಅಪಘಾತದ ಕುರಿತು ಮೃತನ ಮಗನಾದ ಚಾ.ಸಾ.**01** ರವರು ಆರೋಪಿತನ ವಿರುದ್ಧ ಪೊಲೀಸರಿಗೆ ದೂರು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ.ಪಿ.**01** ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಇರುವುದಿಲ್ಲ.</u>

<u>ಮರುವಿಚಾರಣೆಃ</u> ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ, ನನ್ನ ಸಮಕ್ಷಮ

Sd/-

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.